**ದಿನಾಂಕಃ 04.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಜನರಲ್ ಮ್ಯಾನೇಜರ್ ಆಗಿ ಪಿರ್ಯಾದುದಾರರ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು authorization letter ಅನ್ನು ನೀಡಿದ್ದೇನೆ, ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 Authorization letter ನಲ್ಲಿ Hanuman Electronics ವಿರುದ್ದ ಹೂಡಿದ ಪ್ರಕರಣದಲ್ಲಿ ಹಾಜರಾಗುವಂತೆ ನಮೂದಿಸಿಲ್ಲ ಎಂದರೆ ಸಾಕ್ಷಿಯು ಪಿರ್ಯಾದುದಾರರು ತಮ್ಮ ಕಂಪನಿಗೆ ಸೇರಿದ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಾಜರಾಗುವಂತೆ ನಿ.ಪಿ.1 ಅನ್ನು ನೀಡಿದ್ದಾರೆ. ನಿ.ಪಿ.1 ರಲ್ಲಿ ಸದರಿ ಪ್ರಕರಣದಲ್ಲಿ ಹಾಜರಾಗಿ ಸಾಕ್ಷಿ ನುಡಿಯುವಂತೆ ನಮೂದಿಲ್ಲ ಎಂದರೆ ಸಾಕ್ಷಿಯು ನಿ.ಪಿ.1 ರಲ್ಲಿ legal activities ಎಂದು ನಮುದಾಗಿದ್ದು ಅದು ಸದರಿ ಪ್ರಕರಣಕ್ಕೆ ಅನ್ವಯವಾಗುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿ ಇದೇ ಪ್ರಕರಣದಲ್ಲಿ ಹಾಜರಾಗುವಂತೆ ನಿರ್ದಿಷ್ಟವಾದ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಪಿರ್ಯಾದುದಾರರಿಗೆ ಸೇರಿದ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿ.ಪಿ.1 ನ್ನು ನೀಡಿದ್ದಾರೆ ಎಂದುನುಡಿಯುತ್ತಾರೆ.

**2.** ಆರೋಪಿಯೊಂದಿಗೆ ವ್ಯವಹರಿಸುವ ಬಗ್ಗೆ ಇನ್ವಾಯ್ಸ್ ಅನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದನ್ನು ಹಾಜರುಪಡಿಸಿರುವುದಿಲ್ಲ, ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಅನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿಯು ಯಾವ ಯಾವ ಸರಕುಗಳನ್ನು ಸರಬರಾಜು ಮಾಡಿದ್ದೀರಿ ಮತ್ತು ನಿ.ಪಿ.3 ಯಾವ ಇನ್ವಾಯ್ಸ್ ಗೆ ಸಂಬಂಧಿಸಿರುತ್ತದೆ ಎಂದು ಸಂಪೂರ್ಣ ಮಾಹಿತಿಯನ್ನು ನೋಟೀಸು ಮತ್ತು ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಉಳಿಕೆ ಮೊತ್ತಕ್ಕಾಗಿ ನಮಗೆ ಚೆಕ್ಕು ನೀಡಿದ್ದು ಅದರ ವಸೂಲಾತಿಗಾಗಿ ಪ್ರಕರಣ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿಯು 12 ಇನ್ವಾಯ್ಸ್ ಗಳಿಗೆ ಸಂಬಂಧಿಸಿದಂತೆ ನಿ.ಪಿ.3 ರಂತೆ ಚೆಕ್ಕು ನೀಡಿರುತ್ತಾರೆ. ಆರೋಪಿಯು ಪಿರ್ಯಾದುದಾರರ ಕಂಪನಿಯ ಜೊತೆ ಯಾವುದೇ

ವ್ಯವಹಾರ ಮಾಡದ ಕಾರಣ ನಾವು ಇನ್ವಾಯ್ಸ್ ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅಗತ್ಯವಿದ್ದಲ್ಲಿ ಇನ್ವಾಯ್ಸ್ ಗಳನ್ನು ಹಾಜರುಪಡಿಸುತ್ತೇನೆ. ಆರೋಪಿಯೊಂದಿಗೆ ವ್ಯವಹಾರ ಪ್ರಾರಂಭಿಸಿದಾಗ ಆರೋಪಿಯಿಂದ ಕೆಲವೂಂದು ದಾಖಲೆಗಳಾದ ಖಾಲಿ ಚೆಕ್ಕು, ಪ್ರಾಮಿಸರಿ ನೋಟ್ ಮತ್ತು ಸಹಿ ಮಾಡಿದ ಪೇಪರ್ ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**3.** ದಿ.21.05.2022 ರಿಂದ ಆರೋಪಿಯ ಜೊತೆ ವ್ಯವಹಾರ ಪ್ರಾರಂಭವಾಗಿ ದಿ.28.09.2022 ರಂದು ಮುಕ್ತಾಯವಾಗಿರುತ್ತದೆ. ಆರೋಪಿ ಕಂಪನಿಯ ಅಧಿಕೃತ ಸಹಿ ಹೊಂದಿರುವವರು ಅಶ್ವತ್ ನಾರಾಯಣ್ ಆಗಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು ಜಿಎಸ್‌ಟಿ ಕಾಪಿಯನ್ನು ಪಡೆದುಕೊಂಡಿರುತ್ತೇವೆ, ಅದನ್ನು ಹೊರತುಪಡಿಸಿ ಬೇರೆ ದಾಖಲೆ ಪಡೆದುಕೊಂಡಿರುತ್ತಾರೆ. ಅಧಿಕೃತ ದಾಖಲೆಯನ್ನು ಪಡೆದುಕೊಳ್ಳಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ, ಹಾಗಾಗಿ ಪಡೆದುಕೊಳ್ಳಲಿಲ್ಲ ಎಂದು ನುಡಿಯುತ್ತಾರೆ.

**4.** ಆರೋಪಿಯ authorized signatory ಗೆ ನೋಟೀಸು ನೀಡಿದ್ದೀರಾ ಎಂದರೆ ಸಾಕ್ಷಿಯು ಅಶ್ವತ್ ನಾರಾಯಣ ರವರಿಗೆ ನೋಟೀಸು ನೀಡಿದ್ದೇನೆ. ನಿ.ಪಿ.6 ರಂತೆ authorized signatory ಗೆ ನೋಟೀಸು ನೀಡಿರುವುದಿಲ್ಲ ಎಂದರೆ ಸಾಕ್ಷಿಯು Hanuman Electricals ಗೆ ನೋಟೀಸು ನೀಡಿದ್ದು ಆರೋಪಿ ಅದರ ಪ್ರೊಪ್ರೈಟರ್ ಆಗಿದ್ದಾರೆ ಎಂದು ನುಡಿಯುತ್ತಾರೆ. ನಾನು authorized signatory ಗೆ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.6 ರಂತೆ ಕಂಪನಿಗೆ ನೋಟೀಸು ನೀಡಿದ್ದು authorized signatory ಗೆ ನೋಟೀಸು ನೀಡಿರುವುದಿಲ್ಲ ಎಂದರೆ ಸಾಕ್ಷಿಯು Hanuman Electricals ನ ಮಾಲೀಕರು ಆರೋಪಿಯೇ ಆಗಿರುವುದರಿಂದ ನಾನು ಅವರಿಗೆ ನೋಟೀಸು ನೀಡಿದ್ದೇನೆ. ಚೆಕ್ಕಿನಲ್ಲಿ ಸಹಿ ಮಾಡಿರುವ ವ್ಯಕ್ತಿಗೆ ನಾನು ನೋಟೀಸು ನೀಡಿದ್ದೇನೆ. ಆರೋಪಿ ಸಲ್ಲಿಸಿರುವ ವಕಾಲತ್ತಿನಲ್ಲಿ ಅವರ ಸಹಿಗೂ ಮತ್ತು ನಿ.ಪಿ.3 ರಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ.

**5.** ನಿ.ಪಿ.2 ಅಕೌಂಟ್ ಸ್ಟೇಟ್‌ಮೆಂಟ್ ಎಂದರೆ ಸರಿ. ನಿ.ಪಿ.2 ಅನ್ನು ನಾವೇ ತಯಾರಿಸಿ

ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ನಮ್ಮ ಕಂಪನಿಯ ಸ್ಟೇಟ್‌ಮೆಂಟ್ ಅಕೌಂಟ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಭದ್ರತೆಗಾಗಿ ನೀಡಿದಂತಹ ಖಾಲಿ ಚೆಕ್ಕನ್ನು ನಾವು ದುರುಪಯೋಗಪಡಿಸಿಕೊಂಡು ಅದಕ್ಕೆ ನಾವೇ ಸಹಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.3 ರ ಬರವಣಿಗೆಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಆರೋಪಿ ಚೆಕ್ಕನ್ನು ಹೇಗೆ ನೀಡಿದ್ದರೋ ಹಾಗೆಯೇ ನಾವು ಅದನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ಹಣ ಪಾವತಿ ಮಾಡಲು ಬಾಧ್ಯಸ್ತರಾಗಿರುವುದಿಲ್ಲ, ಆ ಕಾರಣ ಇನ್ವಾಯ್ಸ್ ಅನ್ನು ನಾವು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಧಿಕೃತವಾದ Authorization letter ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಆಲಿಸಿ ನೀಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.